ಪೂಜಾರಿ ಜಾಗೃತನಾದ. ಅವನ ಮನಸ್ಸು ಎಲ್ಲೆಲ್ಲೋ ಓಡತೊಡಗಿತು. ಪೊಲೀಸ್ ಬುದ್ಧಿ ಏನೋ ವಾಸನೆ ಹಿಡಿಯತೊಡಗಿತು.

'ಜಗದೀಶ...' ತನ್ನ ಕೋಣೆಯೊಳಗೆ ಕಾಲಿಡುತ್ತಾ ಕೂಗಿದ.

'ಒಂದು ವರ್ಷದಲ್ಲಿ ನಗರದಲ್ಲಿ ದಾಖಲಾದ ಎಲ್ಲಾ ಹದಿನೈದರಿಂದ ಇಪ್ಪತ್ತು ವರ್ಷದೊಳಗಿನ ಯುವತಿಯರ ಮಿಸ್ಸಿಂಗ್ ಕಂಪ್ಲೇಂಟ್ ವರದಿಗಳನ್ನು ತರಿಸು, ಕೇಸ್ ಕ್ಲೋಸ್ ಆಗಿದ್ದರೂ ಪರವಾಗಿಲ್ಲ...'

'ಸರ್, ಪೋಸ್ಟ್‌ಮಾರ್ಟಮ್ ಆಗಿದೆ. ಬಾಡಿ ಕೊಟ್ಟು ಬಿಡೋಣವಾ?' ಜಗದೀಶ ಕೇಳಿದ.

'ಬೇಡ, ಈ ಕೇಸ್ ಕ್ಲೋಸ್ ಆಗುವವರೆಗೂ ಬೇಡ... ನಾನು ಹೇಳಿದ ವಿವರ ತೆಗೆದುಕೊಂಡು ಬಾ, ಸಾಯಂಕಾಲದೊಳಗೆ ನನಗೆ ಬೇಕು... ಹಾಂ... ಸದಾನಂದನಿಗೆ ಸಾಯಂಕಾಲ ಬಂದು ಕಾಣಲಿಕ್ಕೆ ಹೇಳು.'

ಸಾಯಂಕಾಲ ತನ್ನ ಮುಂದಿದ್ದ ಇಪ್ಪತ್ತು ಕೇಸುಗಳ ವಿವರಗಳನ್ನು ಪರಿಶೀಲಿಸುತ್ತಿದ್ದ ಪೂಜಾರಿ ಕೇಳಿದ 'ಜಗದೀಶ... ಸಿಕ್ಸ್ತ್ ಸೆನ್ಸ್ ಅಂದರೆ ಗೊತ್ತಾ ನಿನಗೆ?'

'ಅದೊಂದು ರೀತಿ ದೈವದತ್ತ ಶಕ್ತಿ ಸರ್, ವರದಾನ... ಮುಂದೇನಾಗಬಹುದು... ಅದು ಕೆಟ್ಟದ್ದಾ... ಒಳ್ಳೆಯದಾ... ಅಂತಾ ತಿಳಿಯುತ್ತೆ.'

'ಅಲ್ಲ... ಅದು ನಮ್ಮ ಅನುಭವಗಳು ನಮಗೆ ಕೊಡುವ ಶಕ್ತಿ. ನಮ್ಮ ಮೆದುಳು ನಮಗಾದ ಅನುಭವಗಳು, ಅದರಿಂದಾದ ಪರಿಣಾಮಗಳನ್ನು ಒಟ್ಟುಗೂಡಿಸಿಕೊಂಡು ಒಂದು ಪ್ಯಾಟರ್ನ್ ಮಾಡಿಕೊಂಡಿರುತ್ತದೆ. ಮತ್ತೆ ಯಾವಾಗಾದರೂ ಅದೇ ರೀತಿಯ ಅನುಭವ ಆದರೆ ಆ ಪ್ಯಾಟರ್ನ್‌ಗೆ ಹೋಲಿಸಿಕೊಂಡು ನಮಗರಿವಿಲ್ಲದಂತೆಯೇ ಸಂದೇಶ ನೀಡುತ್ತದೆ. ಹೀಗೆಯೇ ಆಗುತ್ತದೆ ಅಂತಾ... ಹೆಚ್ಚು ಹೆಚ್ಚು ಅನುಭವ ಆದಷ್ಟೂ ಈ ಸಂದೇಶಗಳು ಹೆಚ್ಚು ಸದೃಢವಾಗುತ್ತ ಹೋಗುತ್ತವೆ. ನಮ್ಮ ಮುಂದಿನ ದಾರಿಗಳು ಏನು ಅಂತಾ ಗೊತ್ತಾಗುತ್ತದೆ... ಇದನ್ನೇ ಸಿಕ್ಸ್ತ್ ಸೆನ್ಸ್ ಅಂತಾರೆ... ಪೊಲೀಸರಿಗೆ ಇದು ಹಲವಾರು ಸಂದರ್ಭಗಳಲ್ಲಿ ಸಹಾಯ ಮಾಡುತ್ತದೆ. ಹಿಂದೆ ನಡೆದ ಯಾವುದೋ ಕೇಸಿನ ಸಾಮ್ಯತೆ ಮತ್ತೊಂದು ಕೇಸಿನಲ್ಲಿ ಕಂಡು ನಮಗರಿವಿಲ್ಲದಂತೆಯೇ ನಾವು ಅದೇ ಕೇಸಿನಂತೆ ನೋಡಲು, ತನಿಖೆ ಮಾಡಲು ಪ್ರೇರೇಪಿಸುತ್ತದೆ.'

ಅವನ ಮಾತುಗಳು ಏನೂ ಅರ್ಥ ಆಗದೆ ಸುಮ್ಮನೆ ಮುಖ ನೋಡಿದ ಜಗದೀಶ.

'ನಮ್ಮ ಮುಂದಿನ ಇಪ್ಪತ್ತು ಕೇಸುಗಳಲ್ಲಿನ ಸಾಮ್ಯತೆ ಏನು?'

'ಈ ಎಲ್ಲಾ ಕೇಸುಗಳಲ್ಲಿ ಕಂಪ್ಲೇಂಟ್ ನೀಡಿದವರು ತಂದೆ ತಾಯಂದಿರಲ್ಲ...'

ಅವನೆಡೆ ಮೆಚ್ಚುಗೆಯ ನೋಟ ಹರಿಸಿದ ಪೂಜಾರಿ.

'ಸರಿಯಾಗಿ ಗಮನಿಸು, ಈ ಇಪ್ಪತ್ತು ಕೇಸುಗಳಲ್ಲಿ ಸರಿಯಾದ ಮುಕ್ತಾಯ ಕಂಡಿರುವುದು ಎರಡೇ. ಉಳಿದ ಕೇಸುಗಳು ಯಾವುದೇ ಪ್ರಗತಿ ಇಲ್ಲದಿರುವುದು ಅಥವಾ ಹುಡುಗಿ ಸಿಕ್ಕಿದ್ದಾಳೆಂದು ಕಂಪ್ಲೇಂಟ್ ವಾಪಸ್ ಪಡೆದು ಕ್ಲೋಸ್ ಆಗಿವೆ. ಕೇಸ್ ಕ್ಲೋಸ್ ಆಗಿರುವ ಸಂದರ್ಭಗಳಲ್ಲಿ ಎಲ್ಲಿಯೂ ಪೊಲೀಸರಿಗೆ ಹುಡುಗಿ ಸಿಕ್ಕಿರುವ ವಿವರ ಇಲ್ಲ. ಕೇವಲ ಕಂಪ್ಲೇಂಟ್ ಕೊಟ್ಟವರ ಹೇಳಿಕೆ ಮಾತ್ರ ಇದೆ!'

'ಈ ಎಲ್ಲ ಕೇಸುಗಳಿಗೂ ನಮ್ಮ ಮುಂದಿರುವ ಮಂಗಳಾ ಕೇಸಿಗೂ ಬಹಳ ಸಾಮ್ಯತೆ ಇದೆ. ನನ್ನ ಮಾಹಿತಿದಾರರಿಂದ ಬಹಳಷ್ಟು ಮಾಹಿತಿ ತರಿಸಿದ್ದೇನೆ. ಆ ಸದಾನಂದ ಮತ್ತು ಅವನ ಪತ್ನಿಯನ್ನು ಕರೆಸು... ಫೋನ್ ಮಾಡಿ ಅಲ್ಲ, ಹೋಗಿ ಕರೆದುಕೊಂಡು ಬನ್ನಿ... ಬಾಡಿ ಕೊಡಕ್ಕೆ ಮುಂಚೆ ಕೆಲವು